ಸರಕಾರ
ಕಂದಾಯ ಇಲಾಖೆ

ನಂ.ಎಎಲ್‌ಎನ್ (ಎಂಜಿ)ಸಿಆರ್/64/09-10

ಜಿಲ್ಲಾಧಿಕಾರಿಯವರ ಕಛೇರಿ,
ತುಮಕೂರು ಜಿಲ್ಲೆ,
ತುಮಕೂರು, ದಿನಾಂಕ 18-6-2010.

## ಅನುಬಂಧ-5

## ಅಧಿಕೃತ ಜ್ಞಾಪನ

ವಿಷಯ : ತುಮಕೂರು ಜಿಲ್ಲೆ, ಸಿರಾ ತಾಲ್ಲೂಕು, ಕಸಬಾ ಹೋಬಳಿ, ರತ್ನಸಂದ್ರ ಗ್ರಾಮದ ಸ.ನಂ. 158/1ಎ2 ರಲ್ಲಿ 4-37 ಗುಂಟೆ ಮತ್ತು 0-03 ಗುಂಟೆ 'ಎ' ಖರಾಬು ಸೇರಿ ಒಟ್ಟು 5-00 ಎಕರೆ/ಗುಂಟೆ ವಿಸ್ತೀರ್ಣದ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಿ ಶ್ರೀ ತಾತಾಜಿಮರ್ಗನಿ ಬಿನ್ ನರಸಿಂಗರಾವ್ (ಪೂರ್ಣ ವಿಳಾಸ) ರವರು ಸಲ್ಲಿಸಿರುವ ಅರ್ಜಿ ದಿನಾಂಕ. 4-11-09, 29-3-10.

ಉಲ್ಲೇಖ :1. ಸರ್ಕಾರದ ಸುತ್ತೋಲೆ ನಂ.RD 56 LGP 2008, ದಿ.10-9-08.

2. ಸರ್ಕಾರದ ಸುತ್ತೋಲೆ ನಂ.RD 7 LGP 95, ದಿ.7-6-99.

3. ತಹಸೀಲ್ದಾರ್, ಸಿರಾ ತಾಲೂಕುರವರ ವರದಿ ಸಂಖ್ಯೆ.ಎಎಲ್‌ಎನ್‌ಸಿಆರ್:36/09-10, ದಿನಾಂಕ 2-12-09.

4. ಭೂಪರಿವರ್ತನಾ ಶುಲ್ಕ ರೂ.43465-00 0-03 ಗುಂಟೆ 'ಎ' ಖರಾಬು ಜಮೀನಿನ ಮಾರುಕಟ್ಟೆ ಬೆಲೆ+ಭೂಪರಿವರ್ತನಾ ಶುಲ್ಕ 6287-00 ಹಾಗೂ ಪೋಡಿ ಶುಲ್ಕ ರೂ.55-00 ಒಟ್ಟು ರೂ.49807-00 ಗಳನ್ನು ಚಲನ್ ನಂ.9 ದಿನಾಂಕ.28-5-2010 ರಂದು ಖಜಾನೆಗೆ ಅರ್ಜಿದಾರರು ಜಮಾ ಮಾಡಿರುತ್ತಾರೆ.

<>OOO<>

ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ಕಲಂ 95(2), 95(4) ಮತ್ತು 95(7)ರ ಷರತ್ತುಗಳು ಹಾಗೂ ಈ ಕೆಳಕಂಡ ಷರತ್ತುಗಳಿಗೊಳಪಡಿಸಿ, ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ನಿಯಮಗಳು, 1994 ರ ನಿಯಮ 107(1) ರಂತೆ ಒಟ್ಟು ರೂ.43520-00 (ರೂಪಾಯಿಗಳು ನಲವತ್ತಮೂರು ಸಾವಿರದ ಐದು ನೂರ ಇಪ್ಪತ್ತು ಮಾತ್ರ) ಗಳಂತೆ ಅರ್ಜಿದಾರರು ಉಲ್ಲೇಖ (4) ರಲ್ಲಿ ನಮೂದಿಸಿರುವಂತೆ ಹಣವನ್ನು ಜಮಾ ಮಾಡಿದ ಮೇರೆಗೆ ಅರ್ಜಿದಾರರುಗಳಾದ ಶ್ರೀ ತಾತಾಜಿ ಮರ್ಗನಿ ಬಿನ್ ನರಸಿಂಗರಾವ್ ಇವರ ಅರ್ಜಿಯನ್ನು ಪರಿಗಣಿಸಿ ಕಸಬಾ ಹೋಬಳಿ, ರತ್ನಸಂದ್ರ ಗ್ರಾಮದ ಸ.ನಂ.158/1ಎ2 ರಲ್ಲಿ 4-37 ಗುಂಟೆ ಮತ್ತು 0-03 ಗುಂಟೆ 'ಎ' ಖರಾಬು ಸೇರಿ ರಲ್ಲಿನ ಒಟ್ಟು 5-00 ಎಕರೆ/ಗುಂಟೆ ವ್ಯವಸಾಯದ ಜಮೀನನ್ನು ವ್ಯವಸಾಯೇತರ ವಾಸದ ಉದ್ದೇಶಕ್ಕಾಗಿ ಬಳಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಭೂ ಪರಿವರ್ತನಾ ಆದೇಶವನ್ನು ಹೊರಡಿಸಲಾಗಿದೆ.

01. ಈ ಭೂಮಿಯು ಯಾವ ಉದ್ದೇಶಕ್ಕಾಗಿ ಪರಿವರ್ತನೆಯಾಗಿದೆಯೋ ಆ ಉದ್ದೇಶಕ್ಕೆ ಉಪಯೋಗಿಸಿಕೊಳ್ಳಲು ಸಕ್ಷಮ ಪ್ರಾಧಿಕಾರಿಯಿಂದ ಅಂದರೆ ಅಭಿವೃದ್ಧಿ ಮಂಡಳಿ/ಸಿಎಂಸಿ/ಟಿಎಂಸಿ/ಮಾಲಿನ್ಯ ನಿಯಂತ್ರಣ ಮಂಡಳಿ/ಗ್ರಾಮ ಪಂಚಾಯತಿಗಳಿಂದ ಮಂಜೂರಾತಿಯನ್ನು ಪಡೆಯದ ಹೊರತು ಈ ಆದೇಶವು ಅನುಭವದ ಯಾವುದೇ ಹಕ್ಕನ್ನು ನೀಡುವುದಿಲ್ಲ.

..02)

02. ಈ ಭೂ ಪರಿವರ್ತಿತ ಜಮೀನನ್ನು ವಾಸದ ಉದ್ದೇಶಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳತಕ್ಕದ್ದು. ಈ ಜಮೀನನ್ನು ಪೂರ್ವಾನುಮತಿ ಇಲ್ಲದೆ ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಳ್ಳಬಾರದು.

03. ಈ ಜಮೀನಿನಲ್ಲಿ ಉದ್ದೇಶಿಸಿರುವ ಬಡಾವಣೆ ನಕ್ಷೆ ಹಾಗೂ ಪರವಾನಗಿ ಇತ್ಯಾದಿಗಳನ್ನು ನಗರ ಯೋಜನಾ ಸಹಾಯಕ ನಿರ್ದೇಶಕರು, ತುಮಕೂರು (ಪ್ರಾಧಿಕಾರ/ ನಗರಪಾಲಿಕೆ /ಇತ್ಯಾದಿ) ರವರಿಂದ ಅನುಮೋದಿಸಿಕೊಂಡು, ಆ ನಂತರ ಅನುಮೋದನೆಗೊಂಡ ನಕ್ಷೆಗೆ ಅನುಗುಣವಾಗಿ ಕಟ್ಟಡವನ್ನು ಕಟ್ಟುವುದು. ಸದರಿ ಜಮೀನಿನಲ್ಲಿ ಲೇಔಟ್ ಪ್ಲಾನಿಗೆ ಅನುಮೋದನೆ ಪಡೆಯದೆ ಪರಭಾರೆ ಮಾಡಕೂಡದು. ಹಾಗೂ ಭೂಪರಿವರ್ತನೆ ಪಡೆದ ಉದ್ದೇಶಕ್ಕೆ ಎರಡು ವರ್ಷಗಳ ಅವಧಿಯಲ್ಲಿ ಉಪಯೋಗಿಸತಕ್ಕದ್ದು.

04. ಇತರೆ ಅವಶ್ಯವಾದ ರಸ್ತೆ ಜಾಗ, ರಸ್ತೆ ಮಾರ್ಜಿನ್, ಖಾಲಿ ಜಾಗ ಇತ್ಯಾದಿಗಳನ್ನು ನಗರ ಯೋಜನಾ ಸಹಾಯಕ ನಿರ್ದೇಶಕರು, ತುಮಕೂರು (ಪ್ರಾಧಿಕಾರ/ನಗರಪಾಲಿಕೆ/ಇತ್ಯಾದಿ)ರವರಿಂದ ಅನುಮೋದಿಸಿದ ಬಡಾವಣೆ ನಕ್ಷೆ ಪ್ರಕಾರ ಹಾಗು ನಿರ್ದಿಷ್ಟಪಡಿಸಿದ ನಿಯಮಗಳ ರೀತ್ಯಾ ಸದರಿ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು.

05. ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಜಮೀನಿನಲ್ಲಿ ನಿವೇಶನದಾರರಿಗೆ ನಾಗರಿಕ ಸೌಲಭ್ಯಗಳಾದ ವಿದ್ಯುಚ್ಛಕ್ತಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಇತ್ಯಾದಿಗಳನ್ನು ಆರೋಗ್ಯ, ನೈರ್ಮಲೀಕರಣ ಹಾಗೂ ಭದ್ರತೆ ಉದ್ದೇಶದಿಂದ ಎಲ್ಲಾ ಸೌಲಭ್ಯಗಳನ್ನು ಕಾನೂನು ರೀತ್ಯ ಒದಗಿಸಿಕೊಡುವುದು ಅರ್ಜಿದಾರರ ಜವಾಬ್ದಾರಿಯಾಗಿರುತ್ತದೆ.

06. ಈ ಜಮೀನಿಗೆ ತಾಕು ಫೂಟ್ ಖರಾಬ್ ಜಮೀನಿದ್ದಲ್ಲಿ, ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 67 ರಂತೆ ಸರ್ಕಾರದ ಉದ್ದೇಶಕ್ಕಾಗಿ ಕಾಯ್ದಿರಿಸತಕ್ಕದ್ದು. ಹಾಗೂ ಪ್ರಸ್ತುತ ಭೂ ಪರಿವರ್ತನೆಗೆ ಒಳಪಟ್ಟಿರುವ ಸ.ನಂ.158/1ಎ2 ರಲ್ಲಿನ "ಎ" ಖರಾಬ್ ವಿಸ್ತೀರ್ಣ 0-03 ಗುಂಟೆಗೆ ಮಾರುಕಟ್ಟೆ ದರ ಮತ್ತು ಭೂ ಪರಿವರ್ತನೆ ಶುಲ್ಕ ರೂ. 6287-00 ಪಾವತಿಸಿಕೊಳ್ಳಲಾಗಿದ್ದು ವಾಸದ ಉದ್ದೇಶಕ್ಕಾಗಿ ಬಳಸಲು ಭೂಪರಿವರ್ತನೆ ನೀಡಿದೆ ಹಾಗೂ ಸ.ನಂ.---- ರಲ್ಲಿ ---- ಗುಂಟೆ ವಿಸ್ತೀರ್ಣ "ಬಿ" ಖರಾಬಿನಲ್ಲಿ ಬರುವ ಕಾರಣ ಇದನ್ನು ಸಾರ್ವಜನಿಕ ಉದ್ದೇಶಕ್ಕಾಗಿ ಮೀಸಲಿರಿಸಲಾಗಿದೆ. ಈ ವಿಸ್ತೀರ್ಣದ ಮೇಲೆ ಅರ್ಜಿದಾರರಿಗೆ ಯಾವುದೇ ಹಕ್ಕು ಇರುವುದಿಲ್ಲ. ಈ "ಬಿ" ಖರಾಬಿನ ವಿಸ್ತೀರ್ಣದ ಹಕ್ಕು ಯಾವಾಗಲೂ ಸರ್ಕಾರಕ್ಕೆ ಸೇರಿರುತ್ತದೆ. ತಹಶೀಲ್ದಾರ್ ರವರು ಈ ಬಾಬ್ತು ಆರ್.ಟಿ.ಸಿ ಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

07. ಸರ್ಕಾರದ ಆದೇಶ ಸಂಖ್ಯೆ ಪಿಡಬ್ಲ್ಯುಡಿ 7556-665 ಆರ್ ಮತ್ತು ಬಿ-6-54-5 ಮತ್ತು ಕೇಂದ್ರ ಸರ್ಕಾರದ ಸಾರಿಗೆ ಇಲಾಖೆಯ ಪತ್ರದ ನಂ.ಪಿ1 :7(11) 67 ದಿನಾಂಕ 01.01.1966 ರಂತೆ ಈ ಜಮೀನಿನಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡವು ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 40 ಮೀಟರ್ ಗಳ ಅಂತರವನ್ನು ಮತ್ತು ಜಿಲ್ಲಾ ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಸ್ತೆಯ ಮಧ್ಯಭಾಗದಿಂದ 25 ಮೀಟರ್‌ಗಳ ಅಂತರವನ್ನು ಕಾದಿರಿಸಬೇಕು. ಹಾಗೂ ಈ ಖಾಲಿ ಪ್ರದೇಶದಲ್ಲಿ ಯಾವುದೇ ಕಟ್ಟಡವನ್ನು ಕಟ್ಟಬಾರದು.

08. ಅರ್ಜಿದಾರರು ನಗರ ಭೂ ಪರಿಮಿತಿ ಕಾಯ್ದೆ 1976 ವಿಧಿ 6 (1)ರ ಪ್ರಕಾರ ಸಕ್ಷಮ ಪ್ರಾಧಿಕಾರದಲ್ಲಿ ಘೋಷಣೆ ಪತ್ರವನ್ನು ಸಲ್ಲಿಸದಿದ್ದಲ್ಲಿ ಈಗ ತಕ್ಷಣ ಅಂತಹ ಘೋಷಣೆ ಪತ್ರವನ್ನು ಸಲ್ಲಿಸತಕ್ಕದ್ದು. ಮತ್ತು ಈ ಆದೇಶದ ಪ್ರತಿಯನ್ನು ಸಂಬಂಧಪಟ್ಟ ಭೂ ಪರಿಮಿತಿ ಪ್ರಾಧಿಕಾರಕ್ಕೆ ಕಳುಹಿಸಲಾಗಿದೆ.

09. ಈ ಭೂಪರಿವರ್ತನಾ ಜಮೀನಿನಲ್ಲಿ ಸ್ಥಾಪಿಸಲಾಗುವ ಕೈಗಾರಿಕಾ ಘಟಕಗಳು ಹೊರದೂಡುವ ಹೊಗೆ, ಅನಿಲ ಇತರೆ ಕಲ್ಮಶಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಿ ಸಾರ್ವಜನಿಕರ ಆರೋಗ್ಯಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ ಹಾಗೂ ಪರಿಸರ ಮಾಲಿನ್ಯವಾಗದಂತೆ ನೋಡಿಕೊಳ್ಳತಕ್ಕದ್ದು. ಕೈಗಾರಿಕಾ ಉದ್ದೇಶಕ್ಕಾಗಿ ಭೂ ಪರಿವರ್ತಿತ ಜಮೀನಿನಲ್ಲಿ ಸ್ಥಾಪಿಸುವ ಕೈಗಾರಿಕಾ ಘಟಕಗಳು ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ/ ಪರಿಸರ ಇಲಾಖೆಗಳ ಅನುಮತಿ ಹೊಂದಿರತಕ್ಕದ್ದು.

03)

10. ಭೂಪರಿವರ್ತನೆ ಮಂಜೂರಿ ಯಾವ ಉದ್ದೇಶಕ್ಕೆ ಆಗಿರುತ್ತದೆಯೋ ಆದೇ ಉದ್ದೇಶಕ್ಕೆ ಈ ದಿನದಿಂದ ಎರಡು ವರ್ಷಗಳ ಒಳಗಾಗಿ ಉಪಯೋಗಿಸತಕ್ಕದ್ದು.

11. ಈ ಆದೇಶವು ಸದರಿ ಜಮೀನಿಗೆ ಸಂಬಂಧಪಟ್ಟಂತೆ ಯಾವುದೇ ನ್ಯಾಯಾಲಯದಲ್ಲಿನ ದಾವೆ/ರಿಟ್ ಅರ್ಜಿ/ ಮೇಲ್ಮನವಿಯ ತೀರ್ಪಿಗೆ ಒಳಪಟ್ಟಿರುತ್ತದೆ.

12. ಈ ಭೂಪರಿವರ್ತನಾ ಜಮೀನು ರಾಷ್ಟ್ರೀಯ ಹೆದ್ದಾರಿ ನಂ.4ಕ್ಕೆ ಹೊಂದಿಕೊಂಡಿದ್ದರೆ ಹೆದ್ದಾರಿ ಮಧ್ಯರೇಖೆಯಿಂದ 75 ಮೀಟರ್ ಅಂತರದೊಳಗೆ ಯಾವುದೇ ಕಟ್ಟಡ ವಗೈರೆ ನಿರ್ಮಿಸಬಾರದು ಜಮೀನನ್ನು ಖಾಲಿ ಬಿಡತಕ್ಕದ್ದು.

13. ಮೇಲ್ಕಂಡ ಯಾವುದೇ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಈ ಭೂಪರಿವರ್ತನೆ ಆದೇಶ ಯಾವುದೇ ಸೂಚನೆ ನೀಡದೆ ರದ್ದುಗೊಳಿಸಲಾಗುವುದು ಮತ್ತು ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 96ರಂತೆ ದಂಡ ಶುಲ್ಕವನ್ನು ವಿಧಿಸಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೇ ಈ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿದ ಕಟ್ಟಡಗಳನ್ನು ಯಾವುದೇ ಪರಿಹಾರ ನೀಡದೆ ಕೆಡವಲು ಕ್ರಮ ತೆಗೆದುಕೊಳ್ಳಲಾಗುವುದು ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಭೂ ಕಂದಾಯ ಬಾಕಿ ಎಂದು ಖಾತೆದಾರರಿಂದ ವಸೂಲು ಮಾಡಲಾಗುವುದು.

## ಷೆಡ್ಯೂಲ್ ವಿವರ

ತುಮಕೂರು ಜಿಲ್ಲೆ, ಶಿರಾ ತಾಲೂಕು, ಕಸಬಾ ಹೋಬಳಿ, ರತ್ನಸಂದ್ರ ಗ್ರಾಮದ ಸ.ನಂ. 158/1ಎ2 ರಲ್ಲಿನ ಒಟ್ಟು 5-00 ಎಕರೆ/ಗುಂಟೆ ವಿಸ್ತೀರ್ಣಕ್ಕೆ ಭೂ ಪರಿವರ್ತಿತ ಜಮೀನಿಗೆ :-

| ಚಕ್ಕುಬಂದಿ: | | |
|---|---|---|
| ಪೂರ್ವಕ್ಕೆ | .. | ಸ.ನಂ.158/1ಎ4 |
| ಪಶ್ಚಿಮಕ್ಕೆ | .. | ಸ.ನಂ.129 |
| ಉತ್ತರಕ್ಕೆ | .. | ಸ.ನಂ.158/1ಎ1 |
| ದಕ್ಷಿಣಕ್ಕೆ | .. | ಸ.ನಂ.158/1ಎ3 |

ಸಹಿ.
ಜಿಲ್ಲಾಧಿಕಾರಿಗಳು,
ತುಮಕೂರು ಜಿಲ್ಲೆ.

ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ ಕೆಳಕಂಡವರಿಗೆ ಕಳುಹಿಸಿದೆ :

01. ತಹಸೀಲ್ದಾರರು, ಶಿರಾ ತಾಲೂಕು ರವರಿಗೆ ಮೂಲ ಕಡತ ಹಾಗೂ ಚಲನ್‌ನೊಂದಿಗೆ ಕಳುಹಿಸುತ್ತಾ ಈ ಆದೇಶದ ಪ್ರಕಾರ ಸಂಬಂಧಪಟ್ಟ ಸರ್ವೆ ನಂಬರು ಭೂಪರಿವರ್ತನೆಯಾಗಿದೆ ಎಂದು ಸಂಬಂಧಪಟ್ಟ ಆರ್‌ಟಿಸಿಯಲ್ಲಿ ನಮೂದಿಸತಕ್ಕದ್ದು ಮತ್ತು ಈ ಜಮೀನಿನ ಖಾತೆದಾರರ ಲೆಕ್ಕದಲ್ಲಿ ಸದರಿ ಜಮೀನಿನ ಭೂ ಕಂದಾಯವನ್ನು ಕಡಿಮೆಗೊಳಿಸುವುದು.

02. ನಗರ ಯೋಜನಾ ಸಹಾಯಕ ನಿರ್ದೇಶಕರು, ತುಮಕೂರು (ಪ್ರಾಧಿಕಾರ/ನಗರಪಾಲಿಕೆ) ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.

03. ಅರ್ಜಿದಾರರಾದ ಶ್ರೀ ತಾತಾಜಿ ಮಾರ್ಗನಿ ಬಿನ್ ನರಸಿಂಗರಾವ್, ನಂ.52, ಜ್ಯೋತಿವಿಲ್ಲಾ, 1ನೇ ಮೇನ್, 4ನೇ ಕ್ರಾಸ್, ವಿ.ಎಸ್.ಆರ್.ಲೇಔಟ್, ಉದಯನಗರ, ಬೆಂಗಳೂರು-16 ಇವರಿಗೆ ದೃಢೀಕೃತ ಅಂಚೆ ಮೂಲಕ.

04. ಹೆಚ್ಚಿನ ಪ್ರತಿ.

ಅಪರ ಜಿಲ್ಲಾಧಿಕಾರಿಗಳು,
ತುಮಕೂರು ಜಿಲ್ಲೆ.

D:\TR files\ALN-MG\A-5.doc